# ಕರಾವಳಿ ಜಾನಪದಕ್ಕೆ ಪುರುಷೋತ್ತಮ ಬಿಳಿಮಲೆಯವರ ಕೊಡುಗೆ

**ಅಮರನಾಥ್ ಎನ್.**

ಸಂಶೋಧನಾ ವಿದ್ಯಾರ್ಥಿ, ಎಸ್.ಜೆ.ಬಿ.ಸಿ.ಎಂ.ಎಸ್. ಕನ್ನಡ ಸಂಶೋಧನಾ ಕೇಂದ್ರ, ಬಿ.ಜಿ.ಎಸ್. ಆರೋಗ್ಯ ಮತ್ತು ಶಿಕ್ಷಣ ನಗರ, ಕಂಗೇರಿ.

**Received: 18/11/2024 ; Acepted:15/12/2024 ; Published: 09/01/2025**

**DOI: https://doi.org/10.5281/zenodo.14619640**

## ABSTRACT:

ಪುರುಷೋತ್ತಮ ಬಿಳಿಮಲೆ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಚಿಂತನಶೀಲ ಬರಹಗಾರರಲ್ಲೊಬ್ಬರು. ತಮ್ಮ ಜನಪದ ಸಂಶೋಧನೆ, ವಿಮರ್ಶೆ ಹಾಗೂ ಅಂಕಣ ಬರಹಗಳಲ್ಲಿ ಸಮಾಜದ ಸಂಸ್ಕೃತಿಯನ್ನು ಮತ್ತು ವರ್ತಮಾನದ ನೈಜತೆಯನ್ನು ಹಿಡಿದಿಟ್ಟಿದ್ದಾರೆ. ಇದು ಅವರ ಬರಹದಲ್ಲಿ ಪ್ರತಿ ಹಂತದಲ್ಲೂ ಸ್ಪಷ್ಟವಾಗಿ ತೋರುತ್ತದೆ.

ಬಿಳಿಮಲೆ ಅವರ ಸಂಶೋಧನಾ ಬರಹದಲ್ಲಿ ಕರಾವಳಿ ಮತ್ತು ಸುಳ್ಯ ಪರಿಸರ ಸಮಾಜದ ಬದುಕಿನ ಜನಪದ ಚಿತ್ರಣವನ್ನು ಜನಪದ ಹಿನ್ನೆಲೆಯಲ್ಲಿ ಗುರುತಿಸುವ ಮೂಲಕ ಹೊಸ ಚರ್ಚೆಗೆ ಅನುವು ಮಾಡಿಕೊಡುತ್ತಾರೆ. ಈ ಅಂಶವನ್ನು ಗಮನಿಸುವುದರ ಮೂಲಕ ಲೇಖಕರು ಮಾಡಿದ ಕರಾವಳಿ ಸಂಶೋಧನೆಯನ್ನು ಇಲ್ಲಿ ಚರ್ಚಿಸಲಾಗಿದೆ.

## KEYWORDS:

ಸಿದ್ದವೇಶ, ಕಂಬುಳ-ಕಂಬಳ, ಮೈಲಾರು, ಕರಾವಳಿ, ಜಾನಪದ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅಧ್ಯಯನದ ದೃಷ್ಟಿಕೋನದಿಂದ ಹಲವಾರು ಪಂಥಗಳನ್ನು ಗುರುತಿಸಲಾಗುತ್ತದೆ. ಇದರಲ್ಲಿ ದಲಿತ, ಬಂಡಾಯ, ನವ್ಯ ಹೀಗೆ ಮುಂತಾದ ಸಾಹಿತ್ಯ ಪ್ರಕಾರಗಳು ಬೆಳೆದಿವೆ. ಇವು ಒಂದಕ್ಕೊಂದು ಪೂರಕವಾದ ವಾತಾವರಣವನ್ನು ಮೂಡಿಸಿವೆ. ಆದರೆ ಕನ್ನಡ ಸಾಹಿತ್ಯ ಮತ್ತು ಭಾಷೆಯ ದೃಷ್ಟಿಕೋನದಿಂದ ತನ್ನದೇ ಆದ ವೈಶಿಷ್ಟ್ಯತೆಯನ್ನು ಇಂದಿಗೂ ಉಳಿಸಿಕೊಂಡು ಬಂದಿರುವ ಜಾನಪದ ಸಾಹಿತ್ಯ ಪ್ರತ್ಯೇಕವಾಗಿ ನಿಲ್ಲುತ್ತದೆ. ಜನಪದ ಸಾಹಿತ್ಯವು ಬರಹ ರೂಪದಲ್ಲಿ ದಾಖಲಾಗುವ ಮೊದಲು ಜನರ ನಡುವೆ ಉದ್ಭವಿಸಿದ ಮೌಖಿಕ ಪರಂಪರೆಯ ರೂಪಗಳು. ಇದು ಸಮುದಾಯ, ಸಮಾಜದ ಭಾವನೆ, ಸಂಪ್ರದಾಯ, ಜ್ಞಾನ, ನಂಬಿಕೆ ಮತ್ತು ಜೀವನದ ಭಾಗವಾಗಿ ರೂಪ ಪಡೆಯುತ್ತದೆ. ಈ ಸಾಹಿತ್ಯದಲ್ಲಿ

ಹಾಡುಗಳು, ಗಾದೆ, ಕಥೆ, ಆಚರಣೆ, ಸಂಪ್ರದಾಯಗಳು ರೂಪು ಪಡೆಯುವ ಮೂಲಕ ತನ್ನದೇ ಆದ ವೈಶಿಷ್ಟ್ಯತೆಯನ್ನು ಉಳಿಸಿಕೊಂಡಿದೆ. ಆದ್ದರಿಂದ ಜನಪದ ಅಧ್ಯಯನ ಪ್ರಮುಖವಾದ ಭಾಗವಾಗಿ ಅಭ್ಯಾಸ ಬೇಕಾಗಿದೆ.

ಇಂತಹ ಅಧ್ಯಯನ ಅಥವಾ ಸಂಶೋಧನೆಗಳು ತಾಳ್ಮೆ ಮತ್ತು ವಿಮರ್ಶಾ ಗುಣವನ್ನು ಅಪೇಕ್ಷಿಸುವುದರಿಂದ ಜನಪದ ದಾಖಲಾತಿ ಮತ್ತು ಅವುಗಳ ವೈಜ್ಞಾನಿಕ ವಿಶ್ಲೇಷಣೆಗಳು ಅಧ್ಯಯನದ ದೃಷ್ಟಿಯಿಂದ ನಿರೀಕ್ಷಿತ ಮಟ್ಟದ ಫಲಿತಾಂಶವನ್ನು ನೀಡುತ್ತಿಲ್ಲ. ಈ ಕಾರಣವಾಗಿ ಜನಪದ ಸಂಸ್ಕೃತಿಯ ಹಲವಾರು ವಿಷಯಗಳು ಹುಟ್ಟಿದ ಸ್ಥಳದಲ್ಲಿ ಅವಸಾನದ ಸ್ಥಿತಿಯನ್ನು ಮುಟ್ಟುತ್ತದೆ. ಇಂತಹ ಕೊರತೆಯನ್ನು ನೀಗಿಸಿದ ವಿದ್ವಾಂಸರಲ್ಲಿ ಪುರುಷೋತ್ತಮ ಬಿಳಿಮಲೆಯವರು ಸಹ ಒಬ್ಬರು.

ಪುರುಷೋತ್ತಮ ಬಿಳಿಮಲೆಯವರು ಜನಪದ, ಅಂಕಣ ಬರಹಗಳು, ವಿಮರ್ಶೆ ಮುಂತಾದ ಪ್ರಕಾರಗಳ ಬರವಣಿಗೆಯಲ್ಲಿ ತೊಡಗಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಬಿಳಿಮಲೆಯವರ ಜನಪದ ಸಂಶೋಧನೆ ಮತ್ತು ಅಧ್ಯಯನವು ಜನಪದ ಕ್ಷೇತ್ರಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದೆ. ಅವುಗಳು ಹಂಪಿ ಜಾನಪದ, ಹುಲಿಗಮ್ಮ, ಕುಮಾರರಾಮ, ಕರಾವಳಿ ಜಾನಪದ ಅಧ್ಯಯನಗಳು ವಿಶೇಷವಾಗಿ ಸಂಶೋಧನೆಯ ದೃಷ್ಟಿಯಿಂದ ಗಮನ ಸೆಳೆಯುತ್ತದೆ. ಈ ಕೃತಿಗಳನ್ನು ಗಮನದಲ್ಲಿರಿಸಿಕೊಂಡು ಬಿಳಿಮಲೆಯವರ ಕರಾವಳಿ ಜಾನಪದಕ್ಕೆ ನೀಡಿದ ಕೊಡುಗೆಯನ್ನು ಈ ಲೇಖನದಲ್ಲಿ ಚರ್ಚಿಸಲಾಗಿದೆ.

ಕರಾವಳಿ ಜಾನಪದ ಇತರ ಎಲ್ಲಾ ಪ್ರಾದೇಶಿಕ ಜಾನಪದಗಳಿಗಿಂತ ವಿಶೇಷವಾಗಿ ಗಮನ ಸೆಳೆಯುತ್ತದೆ. ಇಲ್ಲಿನ ಆಟಗಳು, ಪ್ರತಿಭಟನೆಯ ಸ್ವರೂಪ, ಸಂಪ್ರದಾಯ, ಜಾತಿ ರಾಜಕಾರಣ ಇವೆಲ್ಲ ಬಿಳಿಮಲೆಯವರ ಸಂಶೋಧನಾ ಲೇಖನದ ಹಿನ್ನೆಲೆಯಲ್ಲಿ ಓದುಗರನ್ನು ತೀವ್ರವಾಗಿ ಅಧ್ಯಯನದ ಕಡೆಗೆ ಸೆಳೆಯುತ್ತದೆ. ಅವುಗಳಲ್ಲಿ ಸಿದ್ಧವೇಶ, ಕಂಬಲ, ಮೈಲಾರರು ಕುರಿತ ಲೇಖನಗಳು ಹೊಸ ಬಗೆಯ ಆಲೋಚನೆಯ ತೀವ್ರತೆಯನ್ನು ಅಧ್ಯಯನದ ದೃಷ್ಟಿಯಲ್ಲಿ ಹೆಚ್ಚಿಸುತ್ತದೆ.

ಮೊದಲಿಗೆ ಸಿದ್ದವೇಶದ ಬಗ್ಗೆ ಚರ್ಚೆ ಮಾಡುವುದಾದರೆ ತುಳುನಾಡಿನ ಜನಪದ ಕುಣಿತದಲ್ಲಿ ಒಂದು ಕಲೆಯ ರೂಪವಾಗಿ ಸ್ಥಾನ ಪಡೆದಿದೆ. ಇದು ಕರಾವಳಿಯ ಸುಳ್ಯ, ಪುತ್ತೂರು ಮತ್ತು ಬೆಳ್ತಂಗಡಿ ಸುತ್ತಮುತ್ತಲಿನ ಪ್ರದೇಶದಲ್ಲಿ ಕಂಡು ಬರುತ್ತದೆ. ಕೃಷಿ ಕಾರ್ಯಗಳು ಕೊನೆಯಾದ ನಂತರದಲ್ಲಿ ಸಂಭ್ರಮದ ದ್ಯುತಕವಾಗಿ ಆಚರಿಸುವುದು ಕಂಡುಬರುತ್ತದೆ. ಇದನ್ನು 'ಪುರುಷ ಕುಣಿತ' ಎಂದು ಕರೆಯುತ್ತಾರೆ. ಕುಣಿತದಲ್ಲಿ ಹಾಡು ಮತ್ತು ನೃತ್ಯ ಮೇಳೈಸಿರುವುದು ವಿಶೇಷ.

ಸಿದ್ದವೇಶವು ಒಂದು ನೆಲೆಯಿಂದ ವೈಷ್ಣವ ಪಂಥ ಮತ್ತೊಂದು ನೆಲೆಯಿಂದ

ಶೈವ ಪಂಥಗಳು ಪೂಜೆ ಮಾಡುವುದು ಕಂಡು ಬರುತ್ತದೆ. ಇದಕ್ಕೆ ಕಾರಣವನ್ನು ನೀಡುವ ಬಿಳಿಮಲೆಯವರು ಅಂದಿನ ಜನಾಂಗದ ವಲಸೆ ಇದಕ್ಕೆ ಕಾರಣ ಎಂಬುದನ್ನು ತಿಳಿಸುತ್ತಾರೆ. ಸಿದ್ಧವೇಶದಲ್ಲಿ ಕುಣಿತ ಮಾಡುವ ಸಂದರ್ಭದಲ್ಲಿ ವೇಷವನ್ನು ಧರಿಸಿದ ಒಬ್ಬ ವ್ಯಕ್ತಿ ಶಿಶ್ನವನ್ನು ಹಿಡಿದು ಎಲ್ಲರೂ ನಾಚುವಂತೆ ಅಲುಗಾಡಿಸುತ್ತಾನೆ. ನಂತರ ಇದರಲ್ಲಿ ಭಾಗವಹಿಸಿದ ವೇಷದಾರಿಗಳಾದ ಬ್ರಾಹ್ಮಣ, ದಾಸಯ್ಯ ವ್ಯಕ್ತಿಗಳು ಎದುರಾಗುತ್ತಾರೆ. ಹೀಗೆ ಸುಗ್ಗಿಯ ಹುಣ್ಣಿಮೆಯ ದಿನ ಈ ಕುಣಿತ ಕೊನೆಯಾಗುತ್ತದೆ ಎಂಬುದನ್ನು ತಮ್ಮ ಸಂಶೋಧನೆಯಲ್ಲಿ ವಿಶೇಷವಾಗಿ ಗುರುತಿಸುತ್ತಾರೆ.

ಒಂದು ನೆಲೆಯಲ್ಲಿ 'ಸಿದ್ಧವೇಶ ದಾಸಯ್ಯ ಮತ್ತು ಬ್ರಾಹ್ಮಣ್ಯದ ನಿರಾಕರಣೆಯಿದೆ. ಇದು ವೈಷ್ಣವ ಮತ್ತು ಪುರೋಹಿತಶಾಹಿ ಪರಂಪರೆಯ ನಿರಾಕರಣೆಯು ಹೌದು. ಉಚ್ಚ ವರ್ಗದ ಪಾಂಡಿತ್ಯ ಪೂರ್ಣ ವಿಚಾರ ಪರಂಪರೆಗೆ ವಿರುದ್ಧ ವಿಜೃಂಭಿಸಿದ ವೈದಿಕೇತರ ಸಂಪ್ರದಾಯ'[1]ವಾಗಿ ಉಳಿದಿದೆ ಎಂಬ ಅಭಿಪ್ರಾಯವನ್ನು ನೀಡುತ್ತಾರೆ. ಇದು ಆಳುವ ವರ್ಗದ ವಿರುದ್ಧ ಸಿಡಿದೆದ್ದ ಸಮುದಾಯದ ಪ್ರತಿಭಟನೆಯಾಗಿ ಕಂಡರೂ ಸಹ ಬ್ರಾಹ್ಮಣ್ಯದ ವಿರೋಧಿ ನೆಲೆಯು ಪ್ರಬಲವಾಗಿ ಕಂಡುಬರುವುದಿಲ್ಲ. ಕಾರಣ ಸಾಂಕೇತಿಕವಾಗಿ ವಿರೋಧ ಕಂಡುಬಂದರೂ ಸಹ ಇಲ್ಲಿ ಲೇವಡಿ ಮಾಡುವ ರೀತಿ ಚರ್ಚೆಗೆ ಅವಕಾಶವನ್ನು ಮಾಡಿಕೊಡುತ್ತದೆ. ಇದಕ್ಕೆ ಸಿದ್ಧವೇಶವನ್ನು 'ಪುರುಷ ಕುಣಿತ' ಎಂದು ಕರೆಯುವುದು ಸಾಕ್ಷಿಯಾಗಿ ಕಾಣುತ್ತದೆ. ಆದ್ದರಿಂದ ಸಿದ್ಧವೇಶ ಸಾಂಸ್ಕೃತಿಕವಾಗಿ ಧಾರ್ಮಿಕ ಹಂತದಲ್ಲಿ ಪ್ರತಿಭಟನೆಯಾಗಿ ಕಾಣದೆ ಸಮುದಾಯದ ಪ್ರತಿಷ್ಠೆಯ ದ್ಯೋತಕವಾಗಿಯೂ ಕಂಡುಬರುತ್ತದೆ.

ನಂತರ ಕರಾವಳಿಯಲ್ಲಿ ಕಾಣುವ ಕಂಬಳ ಅಥವಾ ಕಂಬುಳ ಬಗ್ಗೆ ಪುರುಷೋತ್ತಮ ಬಿಳಿಮಲೆಯವರ ಸಂಶೋಧನೆ ಕಂಬಳದ ಆಲೋಚನೆಯ ಬಗ್ಗೆ ಹೊಸ ವಿವರವನ್ನು ನೀಡುತ್ತದೆ. ತುಳುನಾಡಿನಲ್ಲಿ ಇಂದಿಗೂ ಕೋಣಗಳ ಸ್ಪರ್ಧೆ ಎಂದೇ ಪ್ರಸಿದ್ಧವಾಗಿರುವ ಕಂಬಳದ ಹಿಂದೆ ಅಡಗಿರುವ ಸಮುದಾಯದ ಆಯಾಮವನ್ನು ಹಿಡಿದಿಡುತ್ತಾರೆ. ಇಲ್ಲಿ ಕೊರಗರ ಪಾತ್ರದ ವಿವರ ಕಂಬಳದ ಹಿನ್ನೆಲೆ ಮತ್ತು ಅದರ ಪ್ರಾಮುಖ್ಯತೆಯನ್ನು ವಿಭಿನ್ನ ನೆಲೆಯಲ್ಲಿ ನೋಡುವ ರೀತಿ ಬಿಳಿಮಲೆಯವರ ಸಂಶೋಧನೆಯ ವಿಧಾನಗಳನ್ನು ತಿಳಿಯಪಡಿಸುತ್ತದೆ. ಈ ಹಿನ್ನೆಲೆಯಲ್ಲಿ ಲೇಖಕರ ಸಂಶೋಧನೆಯನ್ನು ಗುರುತಿಸಲಾಗಿದೆ. ಕಂಬಳ ಪ್ರಾರಂಭವಾಗುವುದಕ್ಕೆ ಮುಂಚೆ ಕೊರಗರು ಗದ್ದೆಯ ಸಮೀಪಕ್ಕೆ ಬರುತ್ತಾರೆ. ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ ಕೊರಗರು ಡೋಲು ಬಾರಿಸುತ್ತಾ, ತಾವು ತಂದ ಬೆಂಕಿಯನ್ನು ಹೆಚ್ಚಿಸಿಕೊಳ್ಳುತ್ತಾ ಕುಣಿಯಲು ಪ್ರಾರಂಭಿಸುತ್ತಾರೆ. ನಂತರ ಕುಣಿತದ ವೇಗ ಹೆಚ್ಚಾದಂತೆ ಧರಿಸಿದ ಬಟ್ಟೆಯನ್ನು ಎಳೆದು ಹಾಕಿ ಬೆತ್ತಲಾಗಲು ಪ್ರಯತ್ನಿಸುತ್ತಾರೆ. ನಂತರ ಲೈಂಗಿಕತೆಯನ್ನು ಅನುಸರಿಸುವ ರೀತಿಯಲ್ಲಿ ನರ್ತನ ಮತ್ತು ಚಟುವಟಿಕೆಗಳು

ಪ್ರಾರಂಭವಾಗುತ್ತದೆ. ಈ ಚಟುವಟಿಕೆಯು ಬೆಳಗಿನ ಜಾವದವರಿಗೂ ನಡೆಯುತ್ತದೆ ಎಂಬ ವಿವರವನ್ನು ಕಂಬಳದ ತಮ್ಮ ಸಂಶೋಧನೆ ಹಿನ್ನೆಲೆಯಲ್ಲಿ ಬಿಳಿಮಲೆಯವರು ವಿವರಿಸುತ್ತಾರೆ.

ಹೀಗೆ ನಡೆಯುವ ಕೊರಗರ ಈ ಆಚರಣೆಯನ್ನು ಕಂಬಳದ ಒಂದು ಪ್ರಮುಖವಾದ ಭಾಗವಾಗಿ ಗುರುತಿಸದೆ ಇರುವ ಬಗ್ಗೆ ಲೇಖಕರಲ್ಲಿ ವಿಷಾದವಿದೆ. ಏಕೆಂದರೆ ಕಂಬಳ ಒಂದು ಆಚರಣೆಯೇ? ಅಥವಾ ಆಟವೇ ಎಂಬುದು ಲೇಖಕರಲ್ಲಿ ಕಂಡುಬರುವ ಜಿಜ್ಞಾಸೆಯ ಮೂಲಕ ಕೊರಗರ ಅಸ್ತಿತ್ವವನ್ನು ಇಲ್ಲಿ ಮರು ವಿಮರ್ಶೆಗೆ ಒಳಪಡಿಸುತ್ತಾರೆ. ಆದ್ದರಿಂದ ಈ ವಿವರವು ಕಂಬಳದ ಬಗೆಗೆ ಹೊಸ ರೀತಿಯ ಒಳವುಗಳನ್ನು ಓದುಗರಿಗೆ ತಲುಪಿಸುತ್ತದೆ. 'ಕೊರಗರು ಕಂಬಳದಲ್ಲಿ ಡೋಲನ್ನು ನಿಯಮಿತವಾಗಿ ಬಾರಿಸುವುದರಿಂದ ಕಂಬಳದ ಗದ್ದೆಗೆ ಒಂದು ಆವರಣವನ್ನು ನಿರ್ಮಾಣ ಮಾಡುತ್ತಾರೆ. ಈ ಆವರಣವು ಶಬ್ದದ ಮೂಲಕ ವ್ಯವಸ್ಥಿತವಾಗುತ್ತದೆ. ಸಾಮಾನ್ಯವಾಗಿ ಪ್ರಕೃತಿಯಲ್ಲಿ ಅವ್ಯವಸ್ಥೆ ಇರುತ್ತದೆಂಬುದು ಮಾನವನ ಗೃಹೀತ. ಡೋಲಿನ ನಿಯಮಿತವಾದ ಶಬ್ದವು ಪ್ರಕೃತಿಯ ಅವ್ಯವಸ್ಥೆಯನ್ನು ವ್ಯವಸ್ಥಿತವಾಗಿ ಮಾರ್ಪಡಿಸುತ್ತದೆ. ಈ ವ್ಯವಸ್ಥೆ ತುಂಬಾ ತಾತ್ಕಾಲಿಕವಾದದ್ದು ಮತ್ತು ಅಮೂರ್ತವಾದದು. ಆದರೆ ಕಂಬಳದ ಗದ್ದೆಯನ್ನು ಹೀಗೆ ಸಾಂಕೇತಿಕವಾಗಿ ವ್ಯವಸ್ಥಿತಗೊಳಿಸದೆ, ಮಾನವನು ತನ್ನ ಸೃಷ್ಟಿಯಾದ ಕಂಬಳವನ್ನು ಅಲ್ಲಿ ನಡೆಸಲು ಸಾಧ್ಯವಿಲ್ಲ. ಮಾನವನು ಪ್ರಕೃತಿಯನ್ನು ತನ್ನ ನೇರಕ್ಕೆ ನಿಯತ್ತಿ ಗೊಳಿಸುವ ವಿಧಾನವಿದು'[2] ಎಂದು ಕಂಬಳದ ಪ್ರಾರಂಭದಲ್ಲಿ ಕೊರಗರ ಕುಣಿತ ಮತ್ತು ಇದರ ಸಾಂಕೇತಿಕತೆಯನ್ನು ದಾಖಲಿಸುತ್ತಾರೆ.

ಆದರೆ ಇದು ಸಮುದಾಯದ ಮಟ್ಟದಲ್ಲಿ ಅಥವಾ ಸಮಾಜದ ಚೌಕಟ್ಟಿನಲ್ಲಿ ಗಮನಿಸಿದರೆ ಮೇಲು ವರ್ಗ ಅಥವಾ ಶ್ರೀಮಂತ ವರ್ಗವು ಹೊಂದಿರುವ ಭೂಮಿಯ ವಿರುದ್ಧವಾಗಿ ಪ್ರತಿಭಟಿಸುವ ಅಂತವಾಗಿ ಪರಿಗಣಿಸಬಹುದು. ಏಕೆಂದರೆ ಆಚರಣೆ ಎನ್ನುವುದು ನಿರಾಕರಣೆಯನ್ನು ಸಾಂಪ್ರದಾಯಿಕ ನೆಲೆಯಲ್ಲಿ ಸ್ವೀಕರಿಸುವುದೇ ಆಗಿರುವುದರಿಂದ ಕೊರಗರು ನಗ್ನವಾಗಿ ಲೈಂಗಿಕ ಕ್ರಿಯೆಯ ಚಟುವಟಿಕೆಯನ್ನು ನಡೆಸುವುದು ಇಲ್ಲಿ ಕೇವಲ ಆಚರಣೆಯಾಗಿ ಕಾಣದೆ ಅದು ಪ್ರತಿಭಟನೆಯ ರೂಪವಾಗಿ ಕಂಡುಬರುತ್ತದೆ. ಆದ್ದರಿಂದ ಕಂಬಳ ಎನ್ನುವುದು ಸಾಮಾಜಿಕ, ಆರ್ಥಿಕ ಆಯಾಮವನ್ನು ಹೊಂದಿರುವ ನಿಲುವಿನಲ್ಲಿಯೂ ಗ್ರಹಿಸಬಹುದಾಗಿದೆ. ಆದರೆ ಇಂದಿನ ಕಾಲಘಟ್ಟದಲ್ಲಿ ಕಂಬಳ ಪ್ರಾದೇಶಿಕತೆಯ ಚೌಕಟ್ಟನ್ನು ಮೀರಿ ನಗರ ಪ್ರದೇಶಗಳಲ್ಲಿ ತನ್ನ ಪ್ರದರ್ಶನಗಳನ್ನು ನೀಡುತ್ತಾ ಕೇವಲ ಆಟ ಅಥವಾ ಸ್ಪರ್ಧೆಯ ರೂಪದಲ್ಲಿ ಬದಲಾಗುತ್ತಿರುವುದು ಕಾಣುತ್ತದೆ. ಈ ಬದಲಾವಣೆ ಜಾನಪದ ಆಚರಣೆಯಲ್ಲಿಯೂ ಹಂತ ಹಂತವಾಗಿ ಜಾಗತೀಕರಣದ ಹೊಯ್ದಾಟಕ್ಕೆ ಸಿಕ್ಕಿ

ಸ್ಪರ್ಧೆಯ ರೂಪವನ್ನು ಪಡೆಯುತ್ತಿರುವ ಬದಲಾವಣೆಯ ಹಂತದಲ್ಲಿ ಕಾಣಸಿಗುತ್ತದೆ.

ಸಿದ್ಧವೇಶ ಮತ್ತು ಕಂಬಳದ ಬಗೆಗೆ ವಿಶೇಷವಾಗಿ ತಮ್ಮ ಸಂಶೋಧನೆಯ ಮೂಲಕ ಬೆಳಕು ಚೆಲ್ಲಿದ ಪುರುಷೋತ್ತಮ ಬಿಳಿಮಲೆಯವರು ಕರಾವಳಿಯ ಬುಡಕಟ್ಟು ಜನರಾದ ಮೈಲರ ಸಮುದಾಯದ ಮೇಲೆ ಅಧ್ಯಯನ ಮಾಡಿದ್ದಾರೆ. ಏಕೆಂದರೆ ಕರಾವಳಿ ಪ್ರದೇಶವು ತನ್ನ ಭೌಗೋಳಿಕ ಪರಿಸರದ ವಿಶೇಷತೆಯೊಂದಿಗೆ ವಿಭಿನ್ನ ಸಾಮಾಜಿಕ ಜೀವನ ಶೈಲಿಯನ್ನು ಹೊಂದಿರುವ ಅನೇಕ ಸಮುದಾಯಗಳನ್ನು ಒಳಗೊಂಡಿದೆ. ಇವುಗಳು ಹುಟ್ಟಿನಿಂದ ಮರಣದವರೆಗಿನ ಆಚಾರ ವಿಚಾರಗಳು ತನ್ನ ಅನನ್ಯತೆಯನ್ನು ಉಳಿಸಿಕೊಂಡು ಬಂದಿದೆ. ಈ ಹಿನ್ನೆಲೆಯಲ್ಲಿ ಯಾವುದೇ ಒಂದು ಸಮುದಾಯದ ಅಧ್ಯಯನ ಅವರ ಸಾಂಸ್ಕೃತಿಕ ದೃಷ್ಟಿಕೋನದಿಂದಲೂ ಮತ್ತು ಅದನ್ನು ದಾಖಲಿಸುವ ಕಾರಣಗಳಿಂದಲೂ ಪ್ರಾಮುಖ್ಯತೆಯನ್ನು ಪಡೆಯುತ್ತದೆ.

ಆದರೆ ಇತ್ತೀಚಿನ ದಿನಗಳಲ್ಲಿ ನಗರೀಕರಣದ ಪ್ರಭಾವಕ್ಕೆ ಅನೇಕ ಬುಡಕಟ್ಟು ಸಮುದಾಯಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡಿವೆ. ಆದರೆ ಇವೆಲ್ಲವನ್ನು ಮೀರಿ ಮೈಲಾರರು ತಮ್ಮ ಜನಾಂಗದ ವೈಶಿಷ್ಟ್ಯತೆಯನ್ನು ಉಳಿಸಿಕೊಳ್ಳುವಲ್ಲಿ ಸಫಲರಾಗಿದ್ದಾರೆ ಎಂಬುದನ್ನು ತಮ್ಮ ಸಂಶೋಧನೆ ಹಿನ್ನೆಲೆಯಲ್ಲಿ ಚರ್ಚಿಸುತ್ತಾರೆ. ಈ ಕಾರಣವಾಗಿ ಬಿಳಿಮಲೆಯವರು ಸಂಶೋಧಿಸಿದ ಮೈಲಾರರು ನಿಗೂಢ ಲೋಕದ ವಿಸ್ಮಯಗಳನ್ನು, ಬುಡಕಟ್ಟು ಜೀವನದ ರಹಸ್ಯಗಳನ್ನು ಲಿಖಿತಾಧಾರವಾಗಿ ಗಮನಿಸಲು ಅವಕಾಶವನ್ನು ಮಾಡಿಕೊಟ್ಟಿದೆ. ಆದ್ದರಿಂದ ಈ ಲೇಖನದ ಒಳಹೊಕ್ಕು ಮೈಲಾರರ ಸಮುದಾಯದ ಸಾಂಸ್ಕೃತಿಕ ವಿಮರ್ಶೆಯನ್ನು ಕಾಣಬಹುದು.

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ, ಪುತ್ತೂರು ಮತ್ತು ಸುಳ್ಯದ ಕೆಲವು ಪ್ರದೇಶಗಳಲ್ಲಿ ಮೈಲಾರರನ್ನು ಸ್ಥಳಿಯವಾಗಿ ಕಾಣಬಹುದಾಗಿದೆ. ಮೈಲಾರರ ಸಮುದಾಯದಲ್ಲಿಯೂ ಇತರ ಬುಡಕಟ್ಟು ಗುಂಪುಗಳಲ್ಲಿರುವ ಒಳ ಜಾತಿಗಳಂತೆ ಇವರಲ್ಲಿಯೂ ಮಳಿಯಾಳಿ ಮಾಲರು, ತುಳು ಮಾಲರು, ಕಜೆ ಮಾಲರು ಎಂಬುದನ್ನು ದಾಖಲಿಸುತ್ತಾರೆ. ಇವರನ್ನು ಬರಿಗಳೆಂದು ಕರೆಯುವುದು ಚಾಲ್ತಿಯಲ್ಲಿದೆ.

ಮೈಲಾರರಲ್ಲಿ ಮದುವೆಯ ಆಚರಣೆಯು ತಾಯಿಯ ಸಹೋದರನ ಮಗಳನ್ನು ಮದುವೆಯಾಗುವುದು ಕಂಡುಬರುತ್ತದೆ. ಆದರೆ ಕೆಲವು ಬಾರಿ ಮೈಲಾರ ಯುವಕರು ತಮಗೆ ಇಷ್ಟವಾದ ಹುಡುಗಿಯನ್ನು ಕರೆದುಕೊಂಡು ಹೋಗಿ ಮದುವೆಯಾಗಿ ಬರುವುದು ಸಹ ಇದೆ. ಇಂತಹ ಮದುವೆ ಆದ ವಧು-ವರರನ್ನು ವಿಚಾರಣೆ ಮಾಡಿ ಅವರಿಂದ ಅಕ್ಕಿ ಮತ್ತು ಹಂದಿಯನ್ನು ಕಪ್ಪ ಕಾಣಿಕೆಯಾಗಿ ಸ್ವೀಕರಿಸಿ ಮತ್ತೆ ಗುಂಪಿಗೆ ಸೇರಿಸಿಕೊಳ್ಳುವ ಪದ್ಧತಿ ಕಂಡುಬರುತ್ತದೆ. ಈ ಆಚರಣೆ ತಮ್ಮ ಒಳಪಂಗಡದಲ್ಲಿ ನಡೆಯುವುದರಿಂದ ಅಂತಹ ವಿಶೇಷತೆ ಏನು ಕಂಡುಬರುವುದಿಲ್ಲ.

ಆದರೆ ಮೈಲಾರರಲ್ಲಿ ವಿಶೇಷವೆಂದು ಗುರುತಿಸುವ ಅಂಶ ವಿಚ್ಛೇದನವನ್ನು ನೀಡುವ ಪದ್ಧತಿ ಇದೆ. ಅದು ವಿಧವೆಯರಿಗೆ ಮತ್ತು ಗಂಡನಿಂದ ತೊಂದರೆ ಅನುಭವಿಸುತ್ತಿರುವ ವಿಚ್ಛೇದನವನ್ನು ನೀಡುವುದು ಚಾಲ್ತಿಯಲ್ಲಿದೆ. ಈ ಪ್ರಕ್ರಿಯೆ ಆಧುನಿಕ ಸಮಾಜವನ್ನು ಅನುಕರಿಸಿದಂತೆ ಕಂಡುಬರುತ್ತದೆ. ಆದರೆ ಇಲ್ಲಿ ನಡೆಯುವ ವಿಚ್ಛೇದನವು ಸಾಕಾರಣವಿಲ್ಲದೆ ನಡೆಯುವುದಿಲ್ಲ ಎಂಬುದು ಮಹತ್ವ ಪಡೆಯುತ್ತದೆ. ಹೀಗೆ ಕೌಟುಂಬಿಕ ಸಂಬಂಧಗಳಲ್ಲಿ ಅತಿ ಸೂಕ್ಷ್ಮ ಮತ್ತು ಭಾವನಾತ್ಮಕವಾಗಿ ಕಾಣುವ ಮೈಲಾರರು ಸಂಬಂಧಗಳಿಗೆ ಹೆಚ್ಚಿನ ಗೌರವವನ್ನು ನೀಡುವುದು ಕಂಡುಬರುತ್ತದೆ.

ಧಾರ್ಮಿಕ ವ್ಯವಸ್ಥೆಯಲ್ಲಿಯೂ ಕುಟುಂಬಕ್ಕೆ ಮಾತ್ರ ಸೀಮಿತವಾಗಿರುವಂತೆ ಆಚರಣೆ ಮಾಡುವುದು ಕಾಣುತ್ತದೆ. ಇವರು ಕುಲದೈವವನ್ನು ಮಂಜ ಎಂದು ಕರೆಯುತ್ತಾರೆ. ಅಷ್ಟೇ ಅಲ್ಲದೆ ಕಲ್ಲುರ್ಟಿ, ಕಲ್ಕುಡ, ಪಂಜುರ್ಲಿ, ಗುಳಿಗ ಮುಂತಾದ ದೈವಗಳ ಆರಾಧನೆಯನ್ನು ಮಾಡುತ್ತಾರೆ. ಹೀಗೆ ಯಾವುದೇ ನಿರ್ದಿಷ್ಟವಾದ ದೃಷ್ಟಿಕೋನವನ್ನು ಹೊಂದದೆ ಪಾರಂಪರಿಕವಾಗಿ ಬಂದಿರುವ ಆಚರಣೆಯನ್ನು ನಡೆಸಿಕೊಂಡು ತಮ್ಮ ಸಂಸ್ಕೃತಿಯನ್ನು ಉಳಿಸಿಕೊಂಡ ಬಗೆಯನ್ನು ಈ ಲೇಖನದಲ್ಲಿ ವಿವರಿಸುತ್ತಾರೆ.

ಹೀಗೆ ಜನಪದ ಆಚರಣೆಯ ದೃಷ್ಟಿಕೋನದಿಂದ ಕರಾವಳಿ ಜಾನಪದಕ್ಕೆ ತಮ್ಮದೇ ಆದ ಕೊಡುಗೆಯನ್ನು ಸಂಶೋಧಕರು ನೀಡಿದ್ದಾರೆ. ಈ ಲೇಖನಗಳು ಜನಪದ ಸಂಸ್ಕೃತಿಯ ಅಧ್ಯಯನದ ಪ್ರಜ್ಞೆಯನ್ನು ವಿಸ್ತರಿಸುತ್ತದೆ. ಅಷ್ಟೇ ಅಲ್ಲದೆ ಪರ್ಯಾಯವಾಗಿ ರಚನೆಗೊಂಡಿರುವ ಸಮುದಾಯದ ಲಕ್ಷಣಗಳು ಮತ್ತು ಅದರ ಸ್ವರೂಪವನ್ನು ಅಭ್ಯಾಸೀಸುವ ಸಂಶೋಧನಾ ವಿದ್ಯಾರ್ಥಿಗಳಿಗೆ ನೆರವಾಗುತ್ತದೆ. ಈ ಕಾರಣದಿಂದಲೇ ಕಂಬಳ, ಸಿದ್ಧವೇಶದ ಲೇಖನಗಳು ಎಲ್ಲಾ ಮಿತಿಗಳನ್ನು ಮೀರಿದ ದಾಖಲೆಗಳಾಗಿ ನಿಲ್ಲುತ್ತದೆ. ಆದ್ದರಿಂದ ಜನಪದವನ್ನು ಕೇವಲ ಸಾಂಸ್ಕೃತಿಕ ನೆಲೆಯಲ್ಲಿ ದಾಖಲಿಸದೆ ಲೋಕದೃಷ್ಟಿಯ ಹಿನ್ನೆಲೆಯಲ್ಲಿಯೂ ಗಮನಿಸುವ ಹಾದಿಯನ್ನು ಪುರುಷೋತ್ತಮ ಬಿಳಿಮಲೆಯವರು ತಮ್ಮ ಸಂಶೋಧನಾ ಲೇಖನಗಳಲ್ಲಿ ಸಾಧಿಸಿದ್ದಾರೆ. ಈ ಮೂಲಕ ಜನಪದ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ.

## ಕೊನೆ ಟಿಪ್ಪಣಿಗಳು:

1. ಪುರುಷೋತ್ತಮ ಬಿಳಿಮಲೆ, (1990), ಕರಾವಳಿ ಜಾನಪದ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು, ಪು.ಸಂ. 27
2. ಅದೇ, ಪು.ಸಂ. 45

## ಪರಾಮರ್ಶನ ಗ್ರಂಥಗಳು:


1. ಪುರುಷೋತ್ತಮ ಬಿಳಿಮಲೆ, (1997), ಕೂಡುಕಟ್ಟು, ಆನಂದಕಂದ ಗ್ರಂಥಮಾಲೆ, ಬೆಳಗಾವಿ.
2. ರಾಮಚಂದ್ರೇಗೌಡ ಹಿ.ಶಿ., (2009), ಜನಪದ ಸಂಸ್ಕೃತಿ, ಕರ್ನಾಟಕ ಜಾನಪದ ಪರಿಷತ್, ಬೆಂಗಳೂರು.
3. ಪುರುಷೋತ್ತಮ ಬಿಳಿಮಲೆ, (1990), ಕರಾವಳಿ ಜಾನಪದ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.